**National**
**Kannada**
**18.06.2025 19.35 hrs**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದ ಸಮಗ್ರತೆಯಿಂದ ದೇಶದ ರಕ್ಷಣಾ ಸಾಮರ್ಥ್ಯ ವೃದ್ಧಿಸುವ ಅಗತ್ಯವಿದೆ - ರಾಷ್ಟ್ರಪತಿ ದ್ರೌಪದಿ ಮುರ್ಮು
2. ಪ್ರಧಾನಿ ಕ್ರೋಯೇಷಿಯಾ ಭೇಟಿ : ದ್ವಿಪಕ್ಷೀಯ ಸಂಬಂಧಗಳಲ್ಲಿ ಹೊಸ ಅಧ್ಯಾಯ ಆರಂಭ
3. ಕಾನೂನು, ವಾಣಿಜ್ಯ ಮತ್ತು ಡಿಜಿಟಲ್ ವ್ಯವಸ್ಥೆಗಳಲ್ಲಿ ಭಾರತೀಯ ಪ್ರಮಾಣಿತ ಸಮಯ : ಐಎಸ್‌ಟಿ ಬಳಕೆ ಶೀಘ್ರದಲ್ಲೇ ಕಡ್ಡಾಯ
4. ದೇಶದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾರ್ಷಿಕ ಟೋಲ್‌ಪಾಸ್ : ಆಗಸ್ಟ್ ೧೫ ರಿಂದ ಜಾರಿ

<><><><>

ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಬಲಪಡಿಸುವುದರ ಜೊತೆಗೆ ಖಾಸಗಿ ವಲಯದ ಪರಿಣತಿಯನ್ನು ಸಮಗ್ರಗೊಳಿಸುವ ಮೂಲಕ ದೇಶದ ರಕ್ಷಣಾ ಸಾಮರ್ಥ್ಯಗಳನ್ನು ವೃದ್ಧಿಸುವ ಅಗತ್ಯವಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಖಾಸಗಿ ಉದ್ಯಮಗಳನ್ನು ರಕ್ಷಣಾ ಉತ್ಪಾದನಾ ವಲಯಕ್ಕೆ ಸೇರಿಸುವ ಮೂಲಕ ದೇಶವು ಸ್ಥಳೀಕರಣದ ಯತ್ನಗಳನ್ನು ವೇಗವನ್ನಾಗಿ ಮಾಡಬಹುದು ಮತ್ತು ಜಾಗತಿಕ ರಕ್ಷಣಾ ಉತ್ಪಾದನಾ ಕೇಂದ್ರವಾಗಿ ಸ್ಥಾಪಿಸಿಕೊಳ್ಳಬಹುದು ಎಂದು ಅವರು ಹೇಳಿದ್ದಾರೆ. ಇಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಅವರು ಭಾರತೀಯ ಕಾರ್ಪೊರೇಟ್ ಕಾನೂನು ಸೇವೆ, ರಕ್ಷಣಾ ವಿಮಾನೋದ್ಯಮ ಗುಣಮಟ್ಟ ಖಾತರಿ ಸೇವೆ ಹಾಗೂ ಕೇಂದ್ರ ಕಾರ್ಮಿಕ ಸೇವೆಯ ಪ್ರಶಿಕ್ಷಣಾರ್ಥಿ ಅಧಿಕಾರಿಗಳನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ, ಈ ಅಧಿಕಾರಿಗಳು ಸಾರ್ವಜನಿಕ ಸೇವೆಯ ಪಯಣ ಆರಂಭಿಸುತ್ತಿರುವಾಗ ತಮ್ಮ ತೀರ್ಮಾನಗಳು ಮತ್ತು ಕ್ರಮಗಳು ಜನಜೀವನವನ್ನು ಬದಲಾಯಿಸುವ ಶಕ್ತಿ ಹೊಂದಿವೆ ಎಂಬುದನ್ನು ಸದಾ ನೆನಪಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕ್ರೊಯೇಶಿಯಾದ ಜಾಗ್ರೆಬ್ ನಗರಕ್ಕೆ ಆಗಮಿಸಿದ್ದಾರೆ. ಇದು ಭಾರತೀಯ ಪ್ರಧಾನಮಂತ್ರಿಯವರು ಈ ದೇಶಕ್ಕೆ ನೀಡುತ್ತಿರುವ ಮೊದಲ ಐತಿಹಾಸಿಕ ಭೇಟಿಯಾಗಿದ್ದು, ಭಾರತ-ಕ್ರೊಯೇಶಿಯಾ ದ್ವಿಪಕ್ಷೀಯ ಸಂಬಂಧಗಳಲ್ಲಿ ಹೊಸ ಅಧ್ಯಾಯವನ್ನು ತೆರೆಯಲಿದೆ. ಈ ಭೇಟಿ ತಂತ್ರಾತ್ಮಕ ಸಹಕಾರವನ್ನು ಗಾಢಗೊಳಿಸುವ ನಿರೀಕ್ಷೆಯಿದ್ದು, ಎರಡೂ ದೇಶಗಳ ನಡುವಿನ ನಿಯೋಗ ಮಟ್ಟದ ಮಾತುಕತೆಗಳು, ಪ್ರಮುಖ ಕ್ಷೇತ್ರಗಳಲ್ಲಿ ಒಪ್ಪಂದಗಳು

ಹಾಗೂ ಸಾಂಸ್ಕೃತಿಕ ಸಹಕಾರದ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಈ ಭೇಟಿಯ ಸಂದರ್ಭದಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ಶಿಕ್ಷಣ ಹಾಗೂ ಸಂಸ್ಕೃತಿ ಕ್ಷೇತ್ರಗಳಲ್ಲಿ ಪ್ರಮುಖ ಒಪ್ಪಂದಗಳಿಗೆ ಭಾರತ ಮತ್ತು ಕ್ರೊಯೇಶಿಯಾ ಸಹಿ ಹಾಕಲಿವೆ. ಕೃಷಿ ಸಂಬಂಧಿತ ಸಮಗ್ರ ಒಪ್ಪಂದವು ೩೦ ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿರಲಿದೆ.

<><><>

ಭಾರತವು ಶೀಘ್ರದಲ್ಲೇ ಎಲ್ಲಾ ಕಾನೂನು, ವಾಣಿಜ್ಯ ಮತ್ತು ಡಿಜಿಟಲ್ ವ್ಯವಸ್ಥೆಗಳಲ್ಲಿ ಭಾರತೀಯ ಪ್ರಮಾಣಿತ ಸಮಯ - ಐಎಸ್‌ಟಿ ಬಳಕೆಯನ್ನು ಕಡ್ಡಾಯಗೊಳಿಸಲಿದೆ ಎಂದು ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ಸಮಯ ಪ್ರಸರಣದ ಕುರಿತಾದ ದುಂಡು ಮೇಜಿನ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಅವರು, ಕಾನೂನು ಮಾಪನಶಾಸ್ತ್ರ ಕಾಯ್ದೆಯಡಿಯಲ್ಲಿ ಶೀಘ್ರದಲ್ಲೇ ನಿಯಮಗಳನ್ನು ತಿಳಿಸಲಾಗುವುದು. ಸಿಎಸ್‌ಐಆರ್-ಎನ್‌ಪಿಎಲ್ ಮತ್ತು ಇಸ್ರೋ ಸಹಯೋಗದೊಂದಿಗೆ ಜಾರಿಗೆ ತರಲಾಗುತ್ತಿರುವ ಸಮಯ ಪ್ರಸರಣ ಯೋಜನೆಯ ಕಾರ್ಯತಂತ್ರದ ಮಹತ್ವವನ್ನು ಒತ್ತಿ ಹೇಳಿದರು. ಈ ಉಪಕ್ರಮವು ವಿಧಿವಿಜ್ಞಾನ ತನಿಖೆಗಳನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ ಮತ್ತು ಸೈಬರ್ ಆಡಿಟ್ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ, ಭಾರತದ ಡಿಜಿಟಲ್ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುತ್ತದೆ ಎಂದು ಅವರು ಹೇಳಿದರು. ಹಣಕಾಸು ಮಾರುಕಟ್ಟೆಗಳು, ವಿದ್ಯುತ್ ಗ್ರಿಡ್‌ಗಳು, ದೂರಸಂಪರ್ಕ, ಸಾರಿಗೆ ಮತ್ತು ಇತರ ಕ್ಷೇತ್ರಗಳಲ್ಲಿ ಐಎಸ್‌ಟಿಯ ನಿಖರ ಮತ್ತು ಏಕರೂಪದ ಪ್ರಸರಣವು ನ್ಯಾಯಸಮ್ಮತತೆ, ನಿಖರತೆ ಮತ್ತು ರಾಷ್ಟ್ರೀಯ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಅತ್ಯಗತ್ಯ ಎಂದು ಸಚಿವರು ಒತ್ತಿ ಹೇಳಿದರು.

<><><>

ದೇಶದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಗಮ ಹಾಗೂ ಕಡಿಮೆ ವೆಚ್ಚದ ಪ್ರಯಾಣಕ್ಕೆ ಸರ್ಕಾರವು ಈ ವರ್ಷದ ಆಗಸ್ಟ್ ೧೫ರಿಂದ ಫಾಸ್ಟ್ಯಾಗ್ ಆಧಾರಿತ ವಾರ್ಷಿಕ ಪಾಸ್ ಅನ್ನು ೩ ಸಾವಿರ ರೂಪಾಯಿ ದರದಲ್ಲಿ ಪರಿಚಯಿಸಲಿದೆ. ಈ ಪಾಸ್ ಸಕ್ರಿಯಗೊಳ್ಳುವ ದಿನಾಂಕದಿಂದ ಒಂದು ವರ್ಷ ಅಥವಾ ಗರಿಷ್ಠ ೨೦೦ ಪ್ರಯಾಣಗಳವರೆಗೆ ಮಾನ್ಯವಾಗಿರುತ್ತದೆ. ಈ ಪಾಸ್‌ಅನ್ನು ಖಾಸಗಿ ಕಾರುಗಳು, ಜೀಪ್‌ಗಳು ಮತ್ತು ವ್ಯಾನ್‌ಗಳಿಗೆ ಮಾತ್ರ ನೀಡಲಾಗುತ್ತಿದ್ದು, ವಾಣಿಜ್ಯ ವಾಹನಗಳಿಗೆ ಅನ್ವಯಿಸುವುದಿಲ್ಲ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ತಮ್ಮ ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ಇದು ರಾಷ್ಟ್ರೀಯ ಹೆದ್ದಾರಿಗಳಲ್ಲಿ ತೊಂದರೆರಹಿತ ಪ್ರಯಾಣದತ್ತ ಪರಿವರ್ತನಾ ಹೆಜ್ಜೆಯಾಗಿದೆ ಎಂದು ಹೇಳಿದ್ದಾರೆ.

<><><>

ಕ್ರೊಯೇಷಿಯಾ ಭಾರತದಿಂದ ಸಾವಿರಾರು ಮೈಲುಗಳಷ್ಟು ದೂರದಲ್ಲಿ ಇರಬಹುದು ಆದರೆ ಭಾರತೀಯ ಸದ್ಭಾವನೆ ಮತ್ತು ಸಂಸ್ಕೃತಿಯ ಹೆಜ್ಜೆಗುರುತು ಮತ್ತು ಮೆಚ್ಚುಗೆ ಕ್ರೊಯೇಷಿಯಾದಲ್ಲಿ ವ್ಯಾಪಕವಾಗಿ ಹರಡಿರುವುದನ್ನು ಕಾಣಬಹುದು. ಕ್ರೊಯೇಷಿಯಾದ ಭಾರತೀಯ ರಾಯಭಾರಿ ಅರುಣ್ ಗೋಯಲ್, ಕ್ರೊಯೇಷಿಯನ್ನರು ಭಾರತದ ಬಗ್ಗೆ ಅಪಾರ ಪ್ರೀತಿ ಮತ್ತು ವಾತ್ಸಲ್ಯವನ್ನು ಹೊಂದಿದ್ದಾರೆ ಎಂದು ಹೇಳಿದರು. ಪ್ರಧಾನಿಯವರ ಭೇಟಿಯೊಂದಿಗೆ ಜನರ ನಡುವಿನ ಸಂಪರ್ಕವು ಸುಧಾರಿಸುತ್ತದೆ ಮತ್ತು ಎರಡೂ ದೇಶಗಳ ಜನರು ಆರ್ಥಿಕ ಮತ್ತು ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಲಾಭ ಪಡೆಯುತ್ತಾರೆ. ಕ್ರೊಯೇಷಿಯಾದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಯೋಗವನ್ನು ಅಭ್ಯಾಸ ಮಾಡುತ್ತಾರೆ ಎಂದು ಅವರು ಹೇಳಿದರು. ಕನಿಷ್ಠ ೧೦ ಸಾವಿರ ಕ್ರೊಯೇಷಿಯನ್ನರು ಪ್ರತಿದಿನ ಯೋಗವನ್ನು ಅಭ್ಯಾಸ ಮಾಡುತ್ತಿದ್ದಾರೆ. ಕ್ರೊಯೇಷಿಯಾದಲ್ಲಿ ೨೫೦ ಯೋಗ ಕೇಂದ್ರಗಳು ಮತ್ತು ೨೫ ಆಯುರ್ವೇದ ಕೇಂದ್ರಗಳಿವೆ ಎಂದು ಅವರು ಹೇಳಿದರು.

ಧ್ವನಿ : ಕ್ರೊಯೇಷಿಯಾದ ರಾಯಭಾರಿ ಅರುಣ್ ಗೋಯಲ್

<><><><>

ಕಳೆದ ಹತ್ತು ವರ್ಷಗಳಲ್ಲಿ ಬಾಕಿ ಉಳಿದಿರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ದೃಢವಾದ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ಎನ್‌ಡಿಎ ಸರ್ಕಾರ ೧೧ ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕಳೆದ ೧೧ ವರ್ಷಗಳಲ್ಲಿ ನಡೆದ ಆಡಳಿತ ಸುಧಾರಣೆಗಳು ಆಡಳಿತಕ್ಕೆ ಮಾತ್ರ ಸೀಮಿತವಾಗಿರದೇ, ದೂರಗಾಮಿ ಪರಿಣಾಮಗಳನ್ನು ಬೀರಿವೆ. ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಜೀವನವನ್ನು ಸುಲಭಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಧ್ವನಿ - ಜಿತೇಂದ್ರ ಸಿಂಗ್

<><><><>

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಆರನೇ ದಿನಕ್ಕೆ ತಲುಪಿದ್ದು, ಕ್ಷಿಪಣಿ ದಾಳಿ ಹಾಗೂ ವಾಯುದಾಳಿಗಳು ಮುಂದುವರಿದ ಹಿನ್ನೆಲೆಯಲ್ಲಿ ಯುದ್ಧದ ಭೀತಿ ಆವರಿಸಿದೆ. ಇಸ್ರೇಲ್, ಟೆಹರಾನ್‌ನಲ್ಲಿರುವ ಸೆಂಟ್ರಿಫ್ಯೂಜ್ ಹಾಗೂ ಶಸ್ತ್ರಾಸ್ತ್ರ ನಿರ್ಮಾಣ ಕೇಂದ್ರಗಳ ಮೇಲೆ ದಾಳಿ ನಡೆಸಿದ ಬೆನ್ನಲ್ಲೇ ತೀವ್ರ ಸ್ಫೋಟಗಳು ಸಂಭವಿಸಿದವು. ಇರಾನ್ ಇಸ್ರೇಲ್ ಕಡೆಗೆ ಹೈಪರ್ ಸೋನಿಕ್ ಫತ್ತಾಹ್ ಕ್ಷಿಪಣಿಯನ್ನೂ ಒಳಗೊಂಡಂತೆ ಮತ್ತಷ್ಟು ಕ್ಷಿಪಣಿಗಳನ್ನು ಉಡಾಯಿಸಿದೆ. ಇಸ್ರೇಲ್ ಸೇನೆ ಈ ದಾಳಿಗಳಲ್ಲಿ ೫೦ಕ್ಕೂ ಹೆಚ್ಚು ಫೈಟರ್ ಜೆಟ್‌ಗಳನ್ನು ಬಳಸಿ ಹಲವು ಉದ್ದಿಮೆಗಳನ್ನು ಗುರಿಯಾಗಿಸಿದೆ

ಎಂದು ತಿಳಿಸಿದೆ. ಕಳೆದ ಐದು ದಿನಗಳಲ್ಲಿ ಐಡಿಎಫ್ ಇರಾನ್‌ನಲ್ಲಿ ೧ ಸಾವಿರದ ೧೦೦ ಸ್ಥಳಗಳ ಮೇಲೆ ದಾಳಿ ಮಾಡಿದೆ ಎಂದು ಇಸ್ರೇಲಿ ಮಿಲಿಟರಿ ವಕ್ತಾರ ಎಫೀ ಡೆಫ್ರಿನ್ ಹೇಳಿದ್ದಾರೆ.

<><><><>

ಇದೇ ೨೧ ರಂದು ಪ್ರಪಂಚದಾದ್ಯಂತ ೧೧ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುವುದು. ಪ್ರಾಚೀನ ಭಾರತೀಯ ಸಂಪ್ರದಾಯದಿಂದ ಜಾಗತಿಕ ಆಂದೋಲನಕ್ಕೆ ಯೋಗದ ವಿಕಸನದ ಕುರಿತು ಆಕಾಶವಾಣಿ ನ್ಯೂಸ್ ವಿಶೇಷ ಸಂಚಿಕೆ ಪ್ರಸಾರ ಮಾಡುತ್ತಿದೆ. ಯೋಗದ ಇತಿಹಾಸವು ಭಾರತದ ಪ್ರಾಚೀನ ನಾಗರಿಕತೆಯಲ್ಲಿ ಆಳವಾಗಿ ಬೇರೂರಿದೆ. ಇದು ಆರಂಭಿಕ ಸಿಂಧೂ-ಸರಸ್ವತಿ ಕಣಿವೆ ಸಂಸ್ಕೃತಿಯಲ್ಲಿ ಆಧ್ಯಾತ್ಮಿಕ ಅಭ್ಯಾಸವಾಗಿ ಪ್ರಾರಂಭವಾಯಿತು ಮತ್ತು ಕ್ರಮೇಣ ಸ್ವಯಂ-ಸಾಕ್ಷಾತ್ಕಾರದ ಕಡೆಗೆ ಶಿಸ್ತಿನ ಮಾರ್ಗವಾಗಿ ವಿಕಸನಗೊಂಡಿತು. ಅನೇಕ ವರ್ಷಗಳವರೆಗೆ, ವಿದ್ವಾಂಸರು ಯೋಗವು ಕ್ರಿ.ಪೂ ೫೦೦ ರ ಸುಮಾರಿಗೆ ಬೌದ್ಧಧರ್ಮದ ಉದಯದ ಸಮಯದಲ್ಲಿ ಹುಟ್ಟಿಕೊಂಡಿತು ಎಂದು ನಂಬಿದ್ದರು. ಆದಾಗ್ಯೂ, ಸಿಂಧೂ-ಸರಸ್ವತಿ ಕಣಿವೆ ನಾಗರಿಕತೆಯ ಪುರಾತತ್ತ್ವ ಶಾಸ್ತ್ರದ ಸಂಶೋಧನೆಗಳು ಯೋಗವು ಹೆಚ್ಚು ಹಳೆಯದು ಎಂದು ಸೂಚಿಸುತ್ತವೆ. ಕಾಲಾನಂತರದಲ್ಲಿ, ಈ ಅಭ್ಯಾಸವು ಶ್ರೀಮಂತ ಶಿಸ್ತಾಗಿ ಅರಳಿತು. ಇದು ವೇದಗಳು, ಉಪನಿಷತ್ತುಗಳು ಮತ್ತು ನಂತರ ಪತಂಜಲಿಯ ಯೋಗ ಸೂತ್ರಗಳಲ್ಲಿ ಸೇರಿಕೊಂಡಿತು. ಮಹಾಭಾರತದ ಯೋಗದ ಆಳವಾದ ಉಲ್ಲೇಖಗಳಿಂದ ಹಿಡಿದು ಸ್ವಾಮಿ ವಿವೇಕಾನಂದ ಮತ್ತು ಬಿ.ಕೆ.ಎಸ್. ಅವರಂತಹ ಮಹಾನ್ ಗುರುಗಳ ೧೯ ಮತ್ತು ೨೦ನೇ ಶತಮಾನದ ಪುನರುಜ್ಜೀವನದವರೆಗೆ. ಪ್ರಾಚೀನ ಸಂಪ್ರದಾಯದಿಂದ ಸಾರ್ವತ್ರಿಕ ಶಿಸ್ತಾಗಿ ರೂಪಾಂತರಗೊಂಡಿದೆ. ೨೦೧೪ ರಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ, ಜೂನ್ ೨೧ ಅನ್ನು ಅಂತಾರಾಷ್ಟ್ರೀಯ ಯೋಗ ದಿನವೆಂದು ಪ್ರಸ್ತಾಪಿಸಿದರು. ಈ ಪ್ರಸ್ತಾಪವನ್ನು ಅಗಾಧ ಬೆಂಬಲದೊಂದಿಗೆ ಅಂಗೀಕರಿಸಲಾಯಿತು. ಅಂದಿನಿಂದ, ಜೂನ್ ೨೧ ಅನ್ನು ಪ್ರಪಂಚದಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನವೆಂದು ಆಚರಿಸಲಾಗುತ್ತಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>